# ಅಂಗೈಯಲ್ಲಿ ಅರಮನೆ

## ಖಾರಾಬಾತ್ ಕಥೆ

ನಾನು ನನ್ನ ಸ್ನೇಹಿತ ಕಾರ್ಯನಿಮಿತ್ತ ಬೆಂಗಳೂರಿಗೆ ಹೋಗಿದ್ದೆವು. ಮುಂಜಾನೆಯೇ ಎದ್ದು ರೈಲು ಹಿಡಿದು ಬಂದಿದ್ದ ನಮಗೆ ಹೊಟ್ಟೆ ತಾಳ ಹಾಕಲು ಶುರು ಮಾಡಿತ್ತು. 'ಯಾವುದಾದರೂ ಒಂದೊಳ್ಳೆ ಹೋಟೆಲ್ ನೋಡು, ತಿಂಡಿ ಮಾಡೋಣ' ಎಂದೆ. 'ಇದು ಸಕ್ಕತ್ತಾಗಿದೆಯಂತೆ, ಬಾ' ಎಂದು ದೊಡ್ಡ ಹೋಟೆಲ್‌ಗೆ ಕರೆದುಕೊಂಡು ಹೋದ. ಮಾಣಿ ತಂದಿಟ್ಟ ಮೆನ್ಯು ನೋಡುತ್ತಾ, 'ಏನೋ ಇದರಲ್ಲಿ ಒಂದೂ ತಿಳಿತಾ ಇಲ್ಲ?' ಅಂದ. 'ಅಯ್ಯೋ ಏನಾದರೂ ಒಂದು ರೈಸ್ ಐಟಂ ಆರ್ಡರ್ ಮಾಡು ಮಾರಾಯ ಹೊಟ್ಟೆ ತುಂಬುವಂತದ್ದು' ಎಂದೆ. ಖಾರಾಬಾತ್ ಆರ್ಡರ್ ಮಾಡಿದ. ಮಾಣಿ ಎರಡು ಉಪ್ಪಿಟ್ಟು ತಂದಿಟ್ಟ. ನಾವು ಪೆಚ್ಚಾದೆವು. 'ಸರ್ ನಾವು ಆರ್ಡರ್ ಮಾಡಿದ್ದು ಖಾರಬಾತು' ಎಂದರೆ ಮಾಣಿ. 'ಇದೇ ಸಾರ್ ಖಾರಬಾತ್' ಎಂದ. 'ಅಲ್ಲ ಮಚ್ಚಿ, ಟೊಮೆಟೋ ಬಾತ್, ವಾಂಗಿಬಾತ್, ರೈಸ್ ಬಾತ್ ತರಾನೇ ಇದು ಯಾವುದು ರೈಸ್ ಐಟಂ ಅಂತ ಆರ್ಡರ್ ಮಾಡಿದ್ರೆ, ಈ ಉಪ್ಪಿಟ್ಟು ತಂದು ಕೊಟ್ಟವ್ರೆ, ನನಗಂತೂ ಹೊಟ್ಟೆ ತುಂಬಲಿಲ್ಲ' ಎಂದು ಪೇಚಾಡಿದ. ಹೆಚ್ಚು ಮಾತಾಡಿದ್ರೆ ಮರ್ಯಾದೆ ಹೋಗುತ್ತೆ ಅಂತ ಸುಮ್ಮನೇ ತಿಂದು ಎದ್ದು ಬಂದೆವು.



**ಸಿಂಧೂರ್ ಗೌಡ**

---



## ಯಮ್ಮಿ...

ಹುಬ್ಬಳ್ಳಿಯಲ್ಲಿದ್ದ ಸಾತಜ್ಜಿ ಮನೆಗೆ ಅಮೆರಿಕದಿಂದ ಅವರ ಮಗ, ಸೊಸೆ ಮತ್ತು ಮೊಮ್ಮಗ ಬಂದಿದ್ದರು. ಅಜ್ಜಿ ಪ್ರೀತಿಯಿಂದ ರವೆ ಉಂಡೆ, ಚಕ್ಕುಲಿ, ತಾಲಿಪಟ್ಟು ಏನೇನೋ ತಿಂಡಿಗಳನ್ನು ಮಾಡಿಕೊಟ್ಟರು. ಮಗು ಸಹ ಇಷ್ಟಪಟ್ಟು ತಿನ್ನುತ್ತಿತ್ತು. ಆದರೆ, ಅವನ ಅಮ್ಮ ಮಾತ್ರ, ತಿನ್ನಿಸುವಾಗೆಲ್ಲಾ ಮಗುಗೆ, 'ಎಷ್ಟು ಯಮ್ಮಿ'ಯಾಗಿದೆ ಅಂತ ಹೇಳುತ್ತಾ ತಿನ್ನಿಸುತ್ತಿದ್ದಳು. ಸಾತಜ್ಜಿಗೆ ಎಲ್ಲಿಲ್ಲದ ಸಿಟ್ಟು ಬರುತ್ತಿತ್ತು. ಒಮ್ಮೆ ಮಗನೆದುರು, 'ನಾನು ಅಷ್ಟು ಪ್ರೀತಿಯಿಂದ ಮಾಡಿಕೊಟ್ಟಿದ್ದನ್ನು ಅವಳು ಸಲೀಸಾಗಿ 'ಎಮ್ಮಿಯಾಗಿದೆ' ಎಂದು ಪರಿಹಾಸ್ಯ ಮಾಡುತ್ತಿದ್ದಾಳೆ' ಎಂದು ನೊಂದುಕೊಂಡಳು. ಮಗ 'ಅಮ್ಮ, ಯಮ್ಮಿಯಾಗಿದೆ, ಎಂದರೆ ಇವರ ಭಾಷೆಯಲ್ಲಿ ರುಚಿಯಾಗಿದೆ' ಅಂತ ಹೇಳಿದಾಗ, ಅಜ್ಜಿಯ ಮುಖದಲ್ಲಿ ಸ್ವಲ್ಪ ಸಮಾಧಾನ ಬಂತು.

**ವಿ.ವಿಜಯೇಂದ್ರ ರಾವ್**